ಸಾಕ್ಷಿಯನ್ನು ದಿಃ 23-02-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಪಾಟಿ ಸವಾಲುಃ 6 ನೇ ಪ್ರತಿವಾದಿ ಪರಃ ಶ್ರೀ ಎಚ್.ಎಸ್. ಎಸ್. ವಕೀಲರಿಂದಃ**

ನನಗೆ ಯಾವ ಕಾರಣಕ್ಕೆ ದಾವೆ ಹಾಕಿದ್ದು ಎಂದು ನನಗೆ ತಿಳಿದಿದೆ. ದಾವೆಯಲ್ಲಿ 06 ವಾದಿಯರು ಇದ್ದಾರೆ. ಜಿಪಿಎ 1 ನೇ ವಾದಿ ಪರವಾಗಿ ಕೊಟ್ಟಿದ್ದಾರೆ ಎಂದರೆ ಸರಿ. ನಾನು ನನ್ನ ಮತ್ತು ಇತರ ವಾದಿಯರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ವಾದ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿ. 1 ನೇ ವಾದಿಗೆ ಕೊಟ್ಟ ಜಿ.ಪಿ.ಎ ರದ್ದು ಮಾಡಿರುವುದಿಲ್ಲ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಜಿಪಿಎ ರದ್ದು ಮಾಡಿರುವುದಿಲ್ಲ ಎಂದು ಹೇಳಿರುವರು. ನನ್ನ ತಾಯಿ ಜಿಪಿಎ ದಾರರು ಆಗಿದ್ದರಿಂದ ನನಗೆ ವಾದಿಯರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ನನಗೆ ಮೌಖಿಕವಾಗಿ ತಿಳಿಸಿದ್ದಾರೆ ಎನ್ನುವರು. ಜಿಪಿಎ ಇದ್ದ ಕಾರಣ ಅದನ್ನು ರದ್ದು ಮಾಡದೇ ನನಗೆ ನನ್ನ ತಾಯಿಯ ಪರವಾಗಿ ಮತ್ತು ನನ್ನ ಪರವಾಗಿ ಸಾಕ್ಷಿ ಹೇಳಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ನನ್ನ ತಾಯಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾವೆಲ್ಲರೂ ಸಲ್ಲಿಸಿದ್ದೇವು. ನಾನು ವಾದ ಪತ್ರಕ್ಕೆ ಸಹಿ ಹಾಕಿದ್ದೇನೆ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಕಾರಣ ದಾವೆಯು 2011 ರದ್ದು ಆಗಿರುತ್ತದೆ. ಅದೇ ರೀತಿ ದಾವೆಯಲ್ಲಿ ಬರೆದ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 5 ರಿಂದ 11 ರವರನ್ನು 2 ಮತ್ತು 3 ನೇ ಪ್ರತಿವಾದಿ ಅವರ ಪ್ರತಿವಾದ ಪತ್ರದಲ್ಲಿ ಅವರು ಸಹ ಪಕ್ಷಗಾರರು ಎಂದು ಹೇಳಿದ ಕಾರಣಕ್ಕೆ ಪ್ರತಿವಾದಿ ನಂ. 5 ರಿಂದ 11 ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ. ಪ್ರತಿವಾದಿ ನಂ. 5 ರಿಂದ 11 ರವರಿಗೆ ಸಂಬಂಧಿಸಿ ನಾನು ಯಾವುದೇ ಪರಿಹಾರ ಕೇಳಿರುವುದಿಲ್ಲ. ಆರ್. ಎ. ನಂ. 29/88 ಮತ್ತು ಆರ್.ಎ.ನಂ. 30/88 ರಲ್ಲಿ ಪ್ರತಿವಾದಿ ನಂ. 5

ರಿಂದ 11 ರವರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ಸದರಿ ಆರ್.ಎ. ಗಳಲ್ಲಿ ಪ್ರತಿವಾದಿ ನಂ. 5 ರಿಂದ 11 ರವರನ್ನು ಕಾನೂನು ರೀತಿಯ ಕಬ್ಜೆ ಪಡೆಯಬೇಕೆಂದು ಆದೇಶ ಆಗಿದೆ ಎಂದರೆ ಸರಿಯಲ್ಲ. ನಿಶಾ ನಿಪಿ-7 ರಲ್ಲಿ ಕಾನೂನು ರೀತಿಯ ಕಬ್ಜೆ ಪಡೆಯ ಬೇಕೆಂದು ಆದೇಶದಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಆದೇಶ ದಿಃ 23-08-2003 ರಂದು ಆಗಿರುತ್ತದೆ ಎಂದರೆ ಸರಿಯಲ್ಲ. ಆದೇಶ ಆದ ನಂತರ ವಾದಿಯರು ಕಾನುನು ರೀತಿಯ ಕಬ್ಜೆ ಪಡೆಯದು ಯಾವುದೇ ದಾವೆ ಹಾಕಿಲ್ಲ ಎಂದು ಪ್ರಶ್ನೆಗೆ ಸಾಕ್ಷಿ ನಮಗೆ ವಿಭಾಗ ಕೇಳಿ ದಾವೆ ಹಾಕಲು ಇತ್ತು ಎನ್ನುವರು. ಈ ದಾವೆಯಲ್ಲಿ ಪ್ರತಿವಾದಿ ನಂ. 5 ರಿಂದ 11 ರವರಿಂದ ಯಾವುದೇ ಕಬ್ಜಾ ಕೇಳಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಈಗಾಗಲೇ ಕಬ್ಜೆಯಲ್ಲಿ ಇರುತ್ತೇವೆ ಎನ್ನುವರು. ಯಾವ ಭಾಗದ ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿ ಇರುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿ ಅದು ವಿಭಾಗ ಆಗಿಲ್ಲ ಎನ್ನುವರು. ನಾವು ಕಬ್ಜೆ ಇಲ್ಲದ್ದಿರೂ ಸಹ ಕಬ್ಜೆಯಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 5 ರಿಂದ 11 ರವರು ಈಗಲೂ ಸಹ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಯಾವುದೇ ಪರಿಹಾರ ಇಲ್ಲದಿದ್ದರೂ ಸಹ ಪ್ರತಿವಾದಿ ನಂ. 5 ರಿಂದ 11 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿದಿದ್ದೇವೆ ಎಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.